

ಬೆಂಗಳೂರಿನಲ್ಲೊಬ್ಬ ಸ್ವಾಮೀಜಿ ಪ್ರೀತಿ-ಪ್ರೇಮದ ಮೂಲಕ ಅಧ್ಯಾತ್ಮಾನಂದ ಸಾಧಿಸಲು ಹೊರಟಿದ್ದರೆ, ಅಹ್ಮದಾಬಾದ್‌ನ ಈ ಪ್ರಹ್ಲಾದ್ ಜಾನಿ ಊಟ- ನೀರು ಬಿಟ್ಟು ಬ್ರಹ್ಮಾನಂದ ಪಡೆಯುತ್ತಿದ್ದಾರಂತೆ. ಅದೂ 70 ವರ್ಷಗಳಿಂದ. ಈಗ ಆಸ್ಪತ್ರೆ ಸೇರಿದ್ದು ವೈದ್ಯರು ಈ ನೀರಾಹಾರ ತ್ಯಾಜ್ಯದ ರಹಸ್ಯದ ಪೇಟೆಂಟ್ ಪಡೆಯಲು ಹೊರಟಿದ್ದಾರೆ.

ಐಪಿಎಲ್‌ನಲ್ಲಿ ಚಿಯರ್ ಗರ್ಲ್ಸ್‌ಗೇನು ಕೆಲಸ? ಕ್ರಿಕೆಟ್ ಆಟ ನೋಡಿ ಬೇಸರವಾದಾಗ ಹುಡುಗಿಯರ ತುಂಟಾಟ ನೋಡಲೆಂದು ನಿಲ್ಲಿಸಿದ್ದರು. ಮ್ಯಾಡ್ರಿಡ್‌ನಲ್ಲಿ ನಡೆದ ಪುಸ್ತಕ ಮೇಳದಲ್ಲೂ ಅಷ್ಟೆ. ಪುಸ್ತಕ ಓದಿ ಓದಿ ಬೇಸರವಾದ ಮಂದಿ ಸಂಶೋಧನೆಗೆ ತೊಡಗಲೆಂದು ಈ ಡ್ರ್ಯಾಗ್ ಕ್ವೀನ್‌ಗಳ ನಿಲ್ಲಿಸಿರಬಹುದು. ಎಷ್ಟೆಂದರೂ ಅದು 'ನೈಟ್ ಆಫ್ ದಿ ಬುಕ್ಸ್' ಮೇಳ.



ಬ್ರೆಜಿಲ್ ಆರೋಗ್ಯ ಸಚಿವರು ದೇಶದ ಪ್ರಜೆಗಳ ಆರೋಗ್ಯ ಕಾಪಾಡಲು ಅಮೂಲ್ಯ ಸೂತ್ರ ಕಂಡು ಹಿಡಿದಿದ್ದಾರೆ. ರಕ್ತದೊತ್ತಡ ನಿಯಂತ್ರಣದಲ್ಲಿ ಇಡಲು ಬೆಳಿಗ್ಗೆ ಮೈದಾನದಲ್ಲಿ ಫುಟ್ಬಾಲ್ ಕ್ರೀಡೆ ಆಡಿದರೆ ಸಾಕಾಗಲ್ಲ, ನಿಯಮಿತವಾಗಿ ರಾತ್ರಿ ಕೂಡಾ ಹಾಸಿಗೆಯಲ್ಲಿ ಕ್ರೀಡೆಯಲ್ಲಿ ತೊಡಗಿ ಎಂದು ಪತ್ರಿಕೆಯಲ್ಲೇ ಕರೆ ಕೊಟ್ಟಿದ್ದಾರಂತೆ. ಲೇವಡಿ ಮಾಡಿದ ಪ್ರತಿಪಕ್ಷದವರಿಗೆ ಒಂದು ತಿಂಗಳು ಪ್ರಯೋಗ ಮಾಡಿ, ಆಮೇಲೆ ಮಾತನಾಡಿ ಎಂದು ಸವಾಲು ಎಸೆದಿದ್ದಾರಂತೆ.

ಯಾವುದನ್ನೂ ಪುಕ್ಕಟೆ ಮಾಡುವವರಲ್ಲ ಚೀನಿಯರು. ಇನ್ನು ಮೃಗಾಲಯದಲ್ಲಿ ಪ್ರಾಣಿಗಳಿಗೆ ಪುಕ್ಕಟೆ ಊಟ ಹಾಕುತ್ತಾರಾ? ಅಲ್ಲಿಯ ಮೃಗಾಲಯದಲ್ಲಿ ಪ್ರಾಣಿಗಳು ಸರ್ಕಸ್ ಪ್ರಾಣಿಗಳಂತೆ ವಿವಿಧ ಕಸರತ್ತು ಮಾಡಲು ಕಲಿತಿವೆ. ನಮ್ಮಲ್ಲಿ ದೊಂಬರಾಟದವರು ಮಾಡಿದಂತೆ ಈ ಆಡು ಬೆನ್ನ ಮೇಲೆ ಮಂಗನನ್ನು ಹೊತ್ತು ರೋಪ್‌ಟ್ರಿಕ್ ಮಾಡುತ್ತಿದೆ.





ಬಿಬಿಎಂಪಿ ಚುನಾವಣೆಯಲ್ಲಿ ಶಾಸಕ, ಮಂತ್ರಿ ಮಹೋದಯರ ಕಾರು ಚಾಲಕರಿಗೆ, ಅಡುಗೆಯವರಿಗೆಲ್ಲ ಟಿಕೆಟ್ ನೀಡಿದ್ದು ಹಳೆಯ ಸುದ್ದಿ. ಫಿಲಿಪ್ಪೀನ್ಸ್‌ನಲ್ಲಿ ಅಧ್ಯಕ್ಷೆ ಗ್ಲೋರಿಯಾ ತನ್ನ ಉಗುರು ಕತ್ತರಿಸುವ ಮಹಿಳೆಗೆ ಸರ್ಕಾರಿ ವಸತಿ ಮಂಡಳಿಗೆ ನೇಮಿಸಿದ್ದು ಹೊಸ ಸುದ್ದಿ. ಸರ್ಕಾರದ ಖಜಾನೆಗೆ ಕತ್ತರಿ ಬಿದ್ದರೂ ಮೇಲೆ ಬಣ್ಣ ಹೊಡೆದು ಅಂದಗೊಳಿಸುತ್ತಾಳಾ?

ಖ್ಯಾತ ಫುಟ್ಬಾಲ್ ಆಟಗಾರ ಪೀಲೆಯ ಕಾಲು, ಮರಡೋನನ ಬಲಿಷ್ಠ ಸ್ನಾಯುಗಳು ಒಬ್ಬನಲ್ಲೇ ಸೇರಿದರೆ.. ವಿಶ್ವದ ನಂಬರ್ ವನ್ ಫುಟ್ಬಾಲ್ ಆಟಗಾರ ಎಂದು ಕಣ್ಮುಚ್ಚಿ ಹೇಳಬಹುದು. ಹೀಗೊಂದು ಪ್ರಯೋಗ ಲಂಡನ್ನಿನಲ್ಲಿ ನಡೆದಿದೆ. ರಕ್ತ, ಮಾಂಸ, ಮಜ್ಜೆಯ ಬದಲು ಮೇಣದಲ್ಲಿ ಮೂಡಿದ ಪ್ರತಿಮೆಯಿದು.



ಬೆಂಗಳೂರಿನ ನಲ್ಲಿಗಳಲ್ಲಿ ನೀರಿನ ಬದಲು ಗಾಳಿ ಮಾಮೂಲು. ಆದರೆ ಮೆಕ್ಸಿಕೊ ಬೀಚ್‌ಗಳಲ್ಲಿ ಇರುವ  ನಲ್ಲಿಗಳಲ್ಲಿ ಬಿಯರ್ ಹೊಳೆ. ಕ್ಯಾನ್, ಗ್ಲಾಸ್, ಬಾಟಲ್ ಎತ್ತಲೂ ಪುರುಸೊತ್ತಿಲ್ಲದ ಜನ ನಲ್ಲಿಗೇ ಬಾಯಿ ಕೊಡುತ್ತಾರೆ. ಬೆಂಗಳೂರು ಸಿಂಗಪುರ ಆಗದಿದ್ದರೂ ಅಡ್ಡಿಯಿಲ್ಲ, ಕನಿಷ್ಠ ಮೆಕ್ಸಿಕೊ ಆದರೆ..!

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65